ಘಟಕ ಯೋಜನೆಯಡಿ ಕೊಟ್ಟಿದ್ದ ಹಣ ಬಹಳಷ್ಟು ಮಟ್ಟಿಗೆ ಖರ್ಚು ಮಾಡಲಿಲ್ಲ. ಈ ಹಣವನ್ನು ಪೂಲ್ ಮಾಡಿ ಡಾ : ಅಂಬೇಡ್ಕರ್ ಜನ್ಮ ಶತಾಬ್ದಿಗೆ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ, ಇದು ಸರಿ ಎನಿಸುವುದಿಲ್ಲ. ಡಾ : ಅಂಬೇಡ್ಕರ್ ಜನ್ಮ ಶತಾಬ್ದಿಗೆ ವಿಶೇಷ ಗ್ರಾಂಟನ್ನು ಸರ್ಕಾರದಿಂದ ಇಟ್ಟು ಅದನ್ನು ಖರ್ಚು ಮಾಡುತ್ತೀರಾ?

ಅಧ್ಯಕ್ಷರು ; ಇನ್ನೂ ಸ್ವಲ್ಪ ಸಮಯ ಇದೆ. ಈಗ ಮತ್ತೊಮ್ಮೆ ಮಾನ್ಯ ಸದಸ್ಯರು ಯಾರು ಗೈರುಹಾಜರಾಗಿದ್ದಾರೆ. ಅದರ ಹೆಸರನ್ನು ಕರೆಯುತ್ತೇನೆ.

ಚುಪ್ರ 100(871), 82(387), 83(855), 91(817), 96(63), 99(831)

(ಮೇಲ್ಕಂಡ ಪ್ರಶ್ನೆಗಳಿಗೆ ಸಂಬಂಧಪಟ್ಟ ಯಾವ ಮಾನ್ಯ ಸದಸ್ಯರೂ ಹಾಜರಿರಲಿಲ್ಲ.)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

**ಕಾವೇರಿ ಜಲ ನ್ಯಾಯಮಂಡಲಿಯ ಮುಂದೆ ಸಮರ್ಥಿಸಿಕೊಳ್ಳಲು ಕಾನೂನು ಘಟಕ**

387 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಎ) ಕಾವೇರಿ ಜಲ ನ್ಯಾಯ ಮಂಡಲಿಯ ಮುಂದೆ ಕರ್ನಾಟಕದ ಪರವಾಗಿ ವಾದಿಸಲು ಕಾನೂನು ಘಟಕವನ್ನು ರಚಿಸಲಾಗಿದೆಯೇ?

ಬಿ) ಹಾಗಿದ್ದರೆ, ಆ ಕಾನೂನು ಘಟಕದಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು?

ಸಿ) ಅವರು ಎಷ್ಟು ಬಾರಿ ಸಭೆ ಸೇರಿದ್ದಾರೆ?

ಡಿ) ಕಾವೇರಿ ಜಲ ನ್ಯಾಯ ಮಂಡಲಿಯ ಮುಂದೆ ಕರ್ನಾಟಕದ ಪರವಾಗಿ ವಾದಿಸಲು ವೆಚ್ಚ ಮಾಡಿದ ಒಟ್ಟು ಮೊತ್ತ ಎಷ್ಟು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

ಎ) ಹೌದು

ಬಿ) 19 ಸದಸ್ಯರು ಮತ್ತು ಅವರ ಪೈಕಿ ಒಬ್ಬರು ಚೇರ್‌ಮನ್‌ರಾಗಿದ್ದಾರೆ.

ಸಿ) ಮುಖ್ಯ ಸಮಿತಿಯು ಮೂರು ಬಾರಿ ಮತ್ತು ಉಪ ಸಮಿತಿಯು ಮೂರು ಬಾರಿ ಸಭೆ ಸೇರಿವೆ.

ಡಿ) ಕರ್ನಾಟಕದ ಪರ ಕಾವೇರಿ ಜಲ ವಿವಾದ ಮಂಡಲಿಯ ಮುಂದೆ ಮೊಕದ್ದಮೆಯನ್ನು ನಡೆಸುವುದಕ್ಕೆ ಈವರೆಗೆ ರೂ. 13,08,523-00 ಖರ್ಚು ಆಗಿದೆ.

**ಮೈಸೂರು ನಗರದ ಪ್ರೀಮಿಯರ್ ಸ್ಟುಡಿಯೋದಲ್ಲಿ ಟಿಪ್ಪುಸುಲ್ತಾನ್ ಧಾರಾವಾಹಿ ಚಿತ್ರೀಕರಣ ಸಮಯದಲ್ಲಿ ಆದ ಅಗ್ನಿ ದುರಂತ**

817 - ಶ್ರೀ ಕೆ. ಲಕ್ಕಪ್ಪ (ತುಮಕೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಎ) ಮೈಸೂರು ನಗರದ ಪ್ರೀಮಿಯರ್ ಸ್ಟುಡಿಯೋದಲ್ಲಿ ಟಿಪ್ಪುಸುಲ್ತಾನ್ ಧಾರವಾಹಿ ಚಿತ್ರೀಕರಣ ಸಮಯದಲ್ಲಿ ಉಂಟಾದ ಅಗ್ನಿ ದುರಂತದಲ್ಲಿ ಮಡಿದವರ ಸಂಖ್ಯೆ ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು?

ಬಿ) ಟಿಪ್ಪುಸಲ್ತಾನ್ ಧಾರಾವಾಹಿ ನಿರ್ದೇಶಕರು ಸಂತ್ರಸ್ತ ಕುಟುಂಬಗಳಿಗೆ ಪೂರ್ಣ ಪರಿಹಾರ ಧನ ನೀಡಿದ್ದಾರೆಯೇ?